ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

ಓ ಎಸ್ 139ಃ2016 ಪ್ರಾಸಾ:5

| | |
|---|---|
| ಸಾಕ್ಷಿದಾರರ ಹೆಸರು:- | ಜಗದೀಶ |
| ತಂದೆಯ ಹೆಸರು:ಗಂಡನ ಹೆಸರುಃ | ಸಣ್ಣಪ್ಪ |
| ವಯಸ್ಸು:- | 37 ವರ್ಷ |
| ವೃತ್ತಿ:- | ಕೂಲಿ ಮತ್ತು ಆಟೋ ಚಾಲನೆ |
| ವಾಸ ಸ್ಥಳಃ- | ಕೆ ಆರ್ ಪೇಟೆ ಟೌನ್ |

ಸಾಕ್ಷಿಗೆ ದಿನಾಂಕಃ18-09-2018 ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಸಾಕ್ಷಿ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ**

ವಾದಿಯರು ಈ ಕೇಸನ್ನು ಪ್ರತಿವಾದಿಯರ ಮೇಲೆ ಹಾಕಿದ್ದಾರೆ. ವಾದಿಯ ಜಮೀನಿನಲ್ಲಿ ಕಾಳೇಗೌಡರು ಮನೆ ಕಟ್ಟಲು ಹೋಗಿದ್ದಕ್ಕೆ ಈ ಕೇಸು ಹಾಕಿದ್ದಾರೆ. ದಾವಾ ಜಮೀನು 1 ನೇ ವಾದಿಯ ಗಂಡನಿಗೆ ಸೇರಿದ್ದು ಆತ ತೀರಿಕೊಂಡ ನಂತರ ಸದರಿ ಜಮೀನು 1 ನೇ ವಾದಿಗೆ ಬಂದಿದೆ. ಸದರಿ ಜಮೀನನ್ನು ನಾನು ನೋಡಿದ್ದೇನೆ. ನಾನು ಅವಗ ಅವಾಗ ದಾವಾ ಜಮೀನಿಗೆ ಕೂಲಿ ಮಾಡಲು ಹೋಗುತ್ತಿದ್ದೆ. ವಾದಿಯರು ದಾವಾ ಜಮೀನಿನಲ್ಲಿ ನನ್ನಿಂದ ಕೂಲಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. 1 ವರ್ಷದ ಹಿಂದೆ ನಾನು ದಾವಾ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗಿದ್ದೆ. ದಾವಾ ಜಮೀನಿನ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ನಿಪಿ 8 ರಿಂದ 15 ಪೋಟೋಗಳಲ್ಲಿ ಮನೆ ಅಡಿಪಾಯ ಹಾಕಿದ್ದು ಸದರಿ ಅಡಿಪಾಯ ಪ್ರತಿವಾದಿ ವಾದಿಯರ ಜಮೀನಿನಲ್ಲಿ ಹಾಕಿದ್ದಾರೆ.

ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಕೆ ಎನ್ ಎನ್ ವಕೀಲರು ಪಾಟೀ ಸವಾಲಿಗೆ ತಯಾರಿದ್ದು ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದು ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ಬೆರಳಚ್ಚು ಮಾಡಲಾಗಿದೆ.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.